(ಕಂದಾಯ ಇಲಾಖೆ)

# ಸಹಾಯಕ ಆಯುಕ್ತರರವರ ನ್ಯಾಯಾಲಯ ಹೊಸಪೇಟೆ

ಸಂ/ಕಂ/ಪಹಣಿ/ಅಪೀಲು/12/2016-17 ದಿನಾಂಕ:17.05.2016.

## ಹಿಂಬರಹ

ವಿಷಯ: ಹೊಸಪೇಟೆ ತಾಲೂಕು ಕಮಲಾಪುರ ಹೋಬಳಿ ಬೈಲುವದ್ದಿಗೇರಿ ಗ್ರಾಮದ ಸ.ನಂ.65/ಬಿ ಪೈಕಿ ವಿಸ್ತೀರ್ಣ: 02 ಎಕರೆ 80 ಸೆಂಟ್ಸ್; ಸ.ನಂ.66/ಸಿ/1 ಪೈಕಿ ವಿಸ್ತೀರ್ಣ: 06 ಎಕರೆ 63 ಸೆಂಟ್ಸ್; ಸ.ನಂ.66/ಸಿ/2 ಪೈಕಿ ವಿಸ್ತೀರ್ಣ: 02 ಎಕರೆ 00 ಸೆಂಟ್ಸ್; ಜಮೀನುಗಳಿಗೆ ಸಂಬಂಧಿಸಿದಂತೆ ತಹಶೀಲ್ದಾರರು, ಹೊಸಪೇಟೆ ಇವರ ಕಾರ್ಯಾಲಯದ ಹಿಂಬರಹ ಸಂಖ್ಯೆ: ಸಂ/ಕಂ/ಪಹಣಿ/168/2014-15 ದಿನಾಂಕ:02.02.2016 ವನ್ನು ಪ್ರಶ್ನಿಸಿ ಮೇಲ್ಮನವಿಯನ್ನು ಸಲ್ಲಿಸಿದ ಬಗ್ಗೆ.

ಉಲ್ಲೇಖ: ಅರ್ಜಿದಾರರಾದ ಶ್ರೀಮತಿ ಕೆ.ಈರಮ್ಮ ಗಂಡ ದಿ॥ ಕೆ.ಜಯಶಂಕರಗೌಡ, ಇವರು ಸಲ್ಲಿಸಿದ ಮೇಲ್ಮನವಿ ದಿನಾಂಕ:13.05.2016.

*****

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಮನವಿಯಲ್ಲಿ ಕೋರಿರುವ ಹೊಸಪೇಟೆ ತಾಲೂಕು ಕಮಲಾಪುರ ಹೋಬಳಿ ಬೈಲುವದ್ದಿಗೇರಿ ಗ್ರಾಮದ ಸ.ನಂ.65/ಬಿ ವಿಸ್ತೀರ್ಣ:02 ಎಕರೆ 80 ಸೆಂಟ್ಸ್; ಸ.ನಂ.66/ಸಿ/1 ವಿಸ್ತೀರ್ಣ: 06 ಎಕರೆ 63 ಸೆಂಟ್ಸ್; ಸ.ನಂ.66/ಸಿ/2 ವಿಸ್ತೀರ್ಣ:02 ಎಕರೆ 00 ಸೆಂಟ್ಸ್; ಜಮೀನುಗಳಿಗೆ ಸಂಬಂಧಿಸಿದಂತೆ ತಹಶೀಲ್ದಾರರು, ಹೊಸಪೇಟೆ ಇವರ ಕಾರ್ಯಾಲಯದ ಹಿಂಬರಹ ಸಂಖ್ಯೆ: ಸಂ/ಕಂ/ಪಹಣಿ/168/2014-15 ದಿನಾಂಕ:02.02.2016 ವನ್ನು ಪ್ರಶ್ನಿಸಿ ಮೇಲ್ಮನವಿಯನ್ನು ಸಲ್ಲಿಸಿರುತ್ತೀರಿ.

ಸದರಿ ಮೇಲ್ಮನವಿಯಲ್ಲಿಯ ದಾಖಲೆಗಳನ್ನು ಪರಿಶೀಲಿಸಲಾಗಿ, ತಾವು ಸಲ್ಲಿಸಿರುವ ದಿನಾಂಕ:01.04.1960 ರಿಂದ ದಿನಾಂಕ:06.07.2011 ರ ಇ.ಸಿ. ಪ್ರತಿಯಲ್ಲಿ ಸ.ನಂ.65/ಬಿ ಪೈಕಿ ವಿಸ್ತೀರ್ಣ:02 ಎಕರೆ 28 ಸೆಂಟ್ಸ್; ಸ.ನಂ.66/ಸಿ ಪೈಕಿ ವಿಸ್ತೀರ್ಣ:09 ಎಕರೆ 63 ಸೆಂಟ್ಸ್; ಜಮೀನುಗಳನ್ನು ನೋಂದಾಯಿತ ಕ್ರಯ ದಸ್ತಾವೇಜು ಸಂಖ್ಯೆ:581/1963 ದಿನಾಂಕ:30.03.1963 ರಂದು ರೂ.1,150/- ಗಳಿಗೆ ಆಫಿಷಿಯಲ್ ರಿಷಿವರ್ ಬಳ್ಳಾರಿ(4) ಹತ್ತಿಕಾಳು ಶರಣಪ್ಪನವರಿಗೆ ಹಕ್ಕು ಉಂಟಾದ ಆಸ್ತಿಗಳನ್ನು ಬಳ್ಳಾರಿ ಸಬ್ ಕೋರ್ಟ್ ಇವರಿಂದ ಕರೇಗೌಡ್ರು ಗಿರಿಮಲ್ಲನಗೌಡ ಇವರ ಹೆಸರಿಗೆ ಕ್ರಯವಾಗಿರುವ ಬಗ್ಗೆ ನಮೂದು ಇರುತ್ತದೆ. ತದನಂತರದಲ್ಲಿ ಸದರಿ ವ್ಯಾಜ್ಯದ ಜಮೀನುಗಳನ್ನು ನೋಂದಾಯಿತ ಕ್ರಯ ದಸ್ತಾವೇಜು ಸಂಖ್ಯೆ:42/84-85 ದಿನಾಂಕ:11.04.1984 ರಂದು ರೂ.16,000/- ಗಳಿಗೆ ಕೆ.ಗಿರಿಮಲ್ಲನಗೌಡ ಇವರಿಂದ ವೀರಭದ್ರಪ್ಪ ಇವರಿಗೆ ಕ್ರಯವಾಗಿರುವ ಬಗ್ಗೆ ನಮೂದು ಇರುತ್ತದೆ. ಮುಂದುವರೆದು ಸ.ನಂ.66/ಸಿ ಪೈಕಿ ವಿಸ್ತೀರ್ಣ: 02 ಎಕರೆ 00 ಸೆಂಟ್ಸ್; ಜಮೀನನ್ನು ನೋಂದಾಯಿತ ಕ್ರಯ ದಸ್ತಾವೇಜು ಸಂಖ್ಯೆ:2007/08-09 ದಿನಾಂಕ:23.08.08 ರಂದು ರೂ.1,62,000/- ಗಳಿಗೆ ಈಶ್ವರಪ್ಪ.ಜಿ. ಇವರಿಂದ ತಿಪ್ಪೇಸ್ವಾಮಿ.ಎಂ. ಇವರಿಗೆ ಕ್ರಯವಾಗಿರುವ ಬಗ್ಗೆ ಕಂಡು ಬಂದಿದ್ದು, ಆ ಪ್ರಕಾರವಾಗಿ ಎಂ.ಆರ್.ನಂ.8/2008-09 ದಿನಾಂಕ:22.01.2009 ರ ಪ್ರಕಾರ ಹಕ್ಕು ಬದಲಾವಣೆ ಆದೇಶವಾಗಿರುತ್ತದೆ. ಹಾಗೂ ಸ.ನಂ.66/ಸಿ ಪೈಕಿ ವಿಸ್ತೀರ್ಣ:01 ಎಕರೆ 00 ಸೆಂಟ್ಸ್; ಜಮೀನನ್ನು ನೋಂದಾಯಿತ ಕ್ರಯ ದಸ್ತಾವೇಜು ಸಂಖ್ಯೆ:2008/08-09 ದಿನಾಂಕ:23.08.08 ರಂದು ರೂ.1,17,000/- ಗಳಿಗೆ ಉಮೇಶ.ಜಿ. ಇವರಿಂದ ತಿಪ್ಪೇಸ್ವಾಮಿ.ಎಂ. ಇವರಿಗೆ ಕ್ರಯವಾಗಿರುವ ಬಗ್ಗೆ ನಮೂದು ಇರುವುದು ಕಂಡು ಬಂದಿದ್ದು, ಆ ಪ್ರಕಾರವಾಗಿ ಎಂ.ಆರ್.ನಂ.9/2008-09 ದಿನಾಂಕ:22.01.2009 ರ ಪ್ರಕಾರ ಹಕ್ಕು ಬದಲಾವಣೆ ಆದೇಶವಾಗಿರುತ್ತದೆ.

ಸದರಿ ವ್ಯಾಜ್ಯದ ಜಮೀನಿನ 1968 ರ ಕೈ ಬರಹ ಪಹಣಿಯಲ್ಲಿ ಗಿರಿಮಲ್ಲನಗೌಡ, ಕಾರಿಗನೂರು ಎಂದು ನಮೂದು ಇದ್ದು, ಎಂ.ನಂ.19/83-84 ರ ಪ್ರಕಾರ ಗುಂಡೆಪ್ಪನವರ ವೀರಣ್ಣನವರ ಮಗ ವೀರಭದ್ರಪ್ಪ ಬೈಲುವದ್ದಿಗೇರಿ ಇವರ ಹೆಸರಿಗೆ ಹಕ್ಕು ಬದಲಾವಣೆಯಾಗಿ 1999 ರವರೆಗೆ ಇವರ ಹೆಸರೇ ಮುಂದುವರೆದಿರುವುದು ಕಂಡು ಬಂದಿರುತ್ತದೆ. ಸದರಿ ಹಕ್ಕು ಬದಲಾವಣೆಯು ಕಾಲಮಿತಿ ಕಾಯ್ದೆಗೆ ಒಳಪಟ್ಟಿರುತ್ತದೆ. ಹಕ್ಕು ಬದಲಾವಣೆ ಆದೇಶ ಸಂಖ್ಯೆ:07/2003-04 ರಲ್ಲಿ ಪಾಲು ವಿಭಾಗ ಪ್ರಕಾರ ಹಕ್ಕು ಬದಲಾವಣೆ ಮಾಡಿಕೊಂಡಿರುವುದು ಕಂಡು ಬಂದಿರುತ್ತದೆ.

ಎಲ್ಲಾ ಹಕ್ಕು ಬದಲಾವಣೆಗಳು ನೋಂದಾಯಿತ ಕ್ರಯ ದಸ್ತಾವೇಜಿನ ಮೂಲಕ ಕೈಗೊಂಡಿರುವುದು ಕಂಡುಬಂದಿರುತ್ತದೆ. ಸದರಿ ನೋಂದಾಯಿತ ದಾಖಲೆಗಳು ಸುಳ್ಳು ಸೃಷ್ಟಿತ ದಾಖಲೆಗಳೆಂದು ತಾವು ತಿಳಿಸಿದ್ದು, ಸದರಿ ಹಕ್ಕು ಬದಲಾವಣೆಗಳನ್ನು ರದ್ದುಪಡಿಸಲು ಕೋರಿರುತ್ತೀರಿ, ಆದರೆ ಸದರಿ ನೋಂದಾಯಿತ ದಾಖಲೆಗಳ ಆಧಾರದ ಮೇಲೆ ಕಂದಾಯ ನಮೂದುಗಳನ್ನು ಬದಲಾವಣೆ ಮಾಡಿದ್ದು, ಈ ಬಗ್ಗೆ ಕ್ರಮ ಕೈಗೊಳ್ಳುವ ಅಧಿಕಾರ ಹಾಗೂ ಕ್ರಯ ಪತ್ರದ ನೈಜತೆಯನ್ನು ನಿರ್ಣಯಿಸುವ ಅಧಿಕಾರ ಹಾಗೂ ಹಕ್ಕು ಮತ್ತು ಸ್ವಾಧೀನತೆಯನ್ನು ನಿರ್ಣಯಿಸುವ ಅಧಿಕಾರ ಮಾನ್ಯ ಸಿವಿಲ್ ನ್ಯಾಯಾಲಯಕ್ಕೆ ಮಾತ್ರ ಇರುತ್ತದೆ.

ಕಾರಣ, ತಮ್ಮ ಮನವಿಯಲ್ಲಿ ಸದರಿ ಹಕ್ಕು ಬದಲಾವಣೆಗಳನ್ನು ರದ್ದುಪಡಿಸುವಂತೆ ಕೋರಲಾಗಿದ್ದು, ನೋಂದಾಯಿತ ಕ್ರಯ ಪತ್ರದ ಆಧಾರದ ಮೇಲೆ ಆಗಿರುವ ಹಕ್ಕು ಬದಲಾವಣೆಗಳ ಮೇಲೆ ಕ್ರಮಜರುಗಿಸಲು ಈ ನ್ಯಾಯಾಲಯದ ವ್ಯಾಪ್ತಿಗೆ ಬಾರದೇ ಇರುವುದರಿಂದ, ಹಾಗೂ ಮೇಲಿನ ಎಲ್ಲ ಅಂಶಗಳು ಸಿವಿಲ್ ಸ್ವರೂಪದ್ದಾಗಿ ಕಂಡು ಬಂದಿರುವುದರಿಂದ ತಾವು ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ಪರಿಹಾರ ಕಂಡುಕೊಳ್ಳಲು ತಿಳಿಸಿ, ತಮ್ಮ ಪ್ರಕರಣವನ್ನು ಇದೇ ಹಂತದಲ್ಲಿ ವಿಲೆಗೊಳಿಸಲಾಗಿದೆ.

(signature)

ಸಹಾಯಕ ಆಯುಕ್ತರು
ಹೊಸಪೇಟೆ

<u>ಇವರಿಗೆ,</u>

1. ಶ್ರೀಮತಿ ಕೆ.ಈರಮ್ಮ ಗಂಡ ದಿ|| ಕೆ.ಜಯಶಂಕರಗೌಡ,
   ಮೋಕಾ ಪೋಸ್ಟ್, ಬಳ್ಳಾರಿ ತಾಲೂಕು ಮತ್ತು ಜಿಲ್ಲೆ.
   ಮೊ.ನಂ.9945360875.

ರವಾನಿಸಲಾಗಿದೆ
ಕ್ರಮಾಂಕ
ದಿನಾಂಕ 27/5/16